ರಾಜ್ಯದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳ ಖರ್ಚಿನ ಬಗ್ಗೆ

೬೯೨ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರಮಿಟಕಲ್).– ಮಾನ್ಯ ಕಂದಾಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ೧೯೮೫-೮೬ನೇ ವರ್ಷದಲ್ಲಿ ರಾಜ್ಯದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ಖರ್ಚು ಮಾಡಿದ ಹಣವೆಷ್ಟು?

ಆ) ಜಾನಂವಾರುಗಳಿಗಾಗಿ ದಿನಂಪ್ರತಿ ಮಾಡುವ ಖರ್ಚೆಷ್ಟು? (ವಿಶಿಷ್ಟವಾಗಿ ಮೇವಿಗಾಗಿ)

ಇ) ರಾಜ್ಯದಲ್ಲಿ ಬರಗಾಲ ಪರಹಾರ ಕಾಮಗಾರಿಗಳಡಿಯಲ್ಲಿ ಒಟ್ಟು ಎಷ್ಟು ಕೂಲಿಕಾರರು ಕೆಲಸ ಮಾಡುತ್ತಿರುವವರು?

ಈ) ಕೇಂದ್ರ ಸರ್ಕಾರವು ೧೯೮೫-೮೬ನೇ ವರ್ಷದಲ್ಲಿ ಬರಗಾಲ ಪರಿಹಾರ ಕಾಮಗಾರಿಗಳಿಗಾಗಿ ರಾಜ್ಯಕ್ಕೆ ಬಿಡುಗಡೆ ಮಾಡಿದ ಕೇಂದ್ರ ನೆರವಿನ ಮೊತ್ತವೆಷ್ಟು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).–

ಅ) ಡಿಸೆಂಬರ್ ೧೯೮೫ರ ಕೊನೆಯವರೆಗೆ ಅಭಾವ ಪರಿಹಾರ ಕಾರ್ಯಕ್ರಮಗಳಿಗಾಗಿ ಒಟ್ಟು ೧೨೦.೯೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದರಲ್ಲಿ ಈ ಹಣವು ಉದ್ಯೋಗ ಪೂರಕ ಯೋಜನೆಗಳಾದ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಡಿಪಿಎಪಿ, ಮತ್ತು ಬರಗಾಲ ಪರಿಹಾರ ಕಾಮಗಾರಿಗಳ ಲೆಕ್ಕದಡಿಯಲ್ಲಿ ಖರ್ಚು ಮಾಡಲಾಗಿದೆ.

ಆ) ದಿನಂಪ್ರತಿ ವೆಚ್ಚದ ಮಾಹಿತಿ ಇರುವುದಿಲ್ಲ. ಮೇವು ಬೆಳೆಯುವುದಕ್ಕೆ ಮತ್ತು ಸಾಗಾಣಿಕೆಗಾಗಿ ಬಿಡುಗಡೆ ಮಾಡಿದ ಒಟ್ಟು ೧೭೨ ಲಕ್ಷ ರೂಪಾಯಿಗಳಲ್ಲಿ ಡಿಸೆಂಬರ್ ೧೯೮೫ರ ಕೊನೆಯವರೆಗೆ ೬೬.೨೦ ಲಕ್ಷ ರೂಪಾಯಿಗಳು ವಿಚಾರ್ಗವೆ. ಇದರ ಜೊತೆಗೆ ೧೫ ಅಭಾವ ಪೀಡಿತ ಜಿಲ್ಲೆಗಳಲ್ಲಿ ೫೦ ಗೋಶಾಲೆಗಳನ್ನು ತೆರೆಯಲು ೧೦೦ ಲಕ್ಷ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಇ) ರಾಜ್ಯದಲ್ಲಿ ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ, ಡಿಪಿಎಪಿ ಮತ್ತು ಅಭಾವ ಪರಿಹಾರ ಕಾಮಗಾರಿಗಳಿಗೆ ದಿನಂಪ್ರತಿ ೫.೦೫.೬೪೨ ಕೂಲಿಕಾರರು ಕೆಲಸ ಮಾಡುತ್ತಿರುವರು.

ಈ) ಕೇಂದ್ರ ಸರ್ಕಾರವು ೫೩.೫೧ ಕ್ಷಿಕೋಟಿ ರೂಪಾಯಿಗಳ ಕೇಂದ್ರ ನೆರವಿನ ಮಿತಿಯನ್ನು ನಿಗದಿಸಿದ್ದು. ಅದರಲ್ಲಿ ಇಲ್ಲಿಯವರೆಗೆ ೪೨ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ.

ಸಹಕಾರ ನೂಲಿನ ಗಿರಣಿಗಳ ಬಗ್ಗೆ

೫೭೩ ಶ್ರೀ ಕೆ. ಬಿ. ಕೋಳಿವಾಡ (ರಾಣೆಬೆನ್ನೂರು).– ಮಾನ್ಯ ಸಹಕಾರ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸನ್ ೧೯೮೦ರಿಂದ ೧೯೮೫ರವರೆಗೆ ರಾಜ್ಯದಲ್ಲಿ ನೊಂದಾಯಿಸಲ್ಪಟ್ಟ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಯಾವುವು?

ಆ) ಸದರೀ ಪ್ರತಿಯೊಂದು ನೂಲಿನ ಗಿರಣಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸದಸ್ಯರ ಪ್ರತಿಶತ ಪ್ರಮಾಣ ಎಷ್ಟು?

ಇ) ಎನ್.ಸಿ.ಡಿ.ಸಿ. ನವದೆಹಲಿ ಇಲ್ಲಿ ಎಷ್ಟು ಸಹಕಾರ ನೂಲಿನ ಗಿರಣಿಗಳ ಪ್ರಸ್ತಾವನೆ ಬಾಕಿ ಇದೆ.

ಈ) ಎನ್.ಸಿ.ಡಿ.ಸಿ. ನವದೆಹಲಿ ಇದಕ್ಕೆ ಇಲ್ಲಿಯವರೆಗೆ ಎಷ್ಟು ಸಹಕಾರಿ ನೂಲಿನ ಗಿರಣಿಗಳ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಬೇಕಾಗಿರುತ್ತದೆ?

ಉ) ಎನ್.ಸಿ.ಡಿ.ಸಿ. ನವದೆಹಲಿ ಇಲ್ಲಿಂದ ಒಪ್ಪಿಗೆ ಆಗದೇ ಇರುವ ಸಹಕಾರಿ ನೂಲಿನ ಗಿರಣಿಗಳ ಸಂಖ್ಯೆ ಎಷ್ಟು?